ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.
ಸಂಖ್ಯೆ : ವಾಇ : ಉ ನಿ : ಸುಮಪ : 2019–20 ದಿನಾಂಕ: 03–08–2019

**<u>ಪತ್ರಿಕಾ ಪ್ರಕಟಣೆ</u>**

# STATE GOVERNMENT NOTIFIES ALL POLICE STATIONS AS POLICE STATIONS UNDER THE KARNATAKA PREVENTION AND ERADICATION OF INHUMAN EVIL PRACTICES AND BLACK MAGIC ACT -2017 AND APPOINTS ALL INSPECTORS OF POLICE AS VIGILANCE OFFICERS

BENGALURU, AUGUST 3 ( KARNATAKA INFORMATION ) :

The State Government has notified all Police Stations in the State, except those designated for the special purpose by the Home Department, as Police Stations under the Karnataka Prevention and Eradication of Inhuman Evil Practices and Black Magic Act - 2017. Also, appointed all the Inspectors of Police in charge of these Police Stations as Vigilance Officers to discharge the duties within their jurisdiction, according to a Government Notification.

*******

DPM

## ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳನ್ನೂ ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನಾ ಅಧಿನಿಯಮ – 2017 ಅನ್ವಯ ಪೊಲೀಸ್ ಠಾಣೆಗಳು ಎಂದು ಅಧಿಸೂಚಿಸಿ, ಅಲ್ಲಿನ ಪೊಲೀಸ್ ಇನ್ಸ್‌ಪೆಕ್ಟರ್‌ಗಳನ್ನು ಜಾಗೃತಾಧಿಕಾರಿಗಳನ್ನಾಗಿ ನೇಮಕ ಮಾಡಿದ ರಾಜ್ಯ ಸರ್ಕಾರ

**ಬೆಂಗಳೂರು, ಆಗಸ್ಟ್ 3 ( ಕರ್ನಾಟಕ ವಾರ್ತೆ ) :**

**ಒಳಾಡಳಿತ ಇಲಾಖೆ ನಿಗದಿಪಡಿಸಿದ ವಿಶೇಷ ಪೊಲೀಸ್ ಠಾಣೆಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳನ್ನೂ ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನಾ ಅಧಿನಿಯಮ – 2017 ಅನ್ವಯ ಪೊಲೀಸ್ ಠಾಣೆಗಳು ಎಂದು ರಾಜ್ಯ ಸರ್ಕಾರ ಅಧಿಸೂಚಿಸಿದೆ. ಅಲ್ಲದೆ, ಈ ಪೊಲೀಸ್ ಠಾಣೆಗಳಲ್ಲಿನ ಪೊಲೀಸ್ ಇನ್ಸ್‌ಪೆಕ್ಟರ್‌ಗಳನ್ನು ತಮ್ಮ ವ್ಯಾಪ್ತಿಯಲ್ಲಿ ಜಾಗೃತಾಧಿಕಾರಿಗಳನ್ನಾಗಿ ಕರ್ತವ್ಯ ನಿರ್ವಹಿಸಲು ನೇಮಕ ಮಾಡಲಾಗಿದೆ ಎಂದು ಸರ್ಕಾರದ ಅಧಿಸೂಚನೆ ತಿಳಿಸಿದೆ.**

***********

**ಡಿ ಪಿ ಎಂ**

**<u>ಪತ್ರಿಕಾ ಪ್ರಕಟಣೆ</u>**

## <u>ಸಂದರ್ಶನ</u>

ಬೆಂಗಳೂರು, ಆಗಸ್ಸ್ 3 ( ಕರ್ನಾಟಕ ವಾರ್ತೆ)

ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಪಿ. ಕಾಳಿಂಗರಾವ್ ರಸ್ತೆ, ಸುಬ್ಬಯ್ಯ ವೃತ್ತ, ಬೆಂಗಳೂರು – 27 ಇಲ್ಲಿ 2019–20 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಬಿ. ಫಾರ್ಮ ಕೋರ್ಸಿನ (ಸಿಇಟಿ 2019 ಎರಡನೇ ಮುಂದುವರೆದ ಸುತ್ತಿನ ಸೀಟು ಹಂಚಿಕೆ ಮುಗಿದ ನಂತರ) ಉಳಿದ ಬಾಕಿ ಸೀಟುಗಳಿಗೆ ಅರ್ಹ ಅಭ್ಯರ್ಥಿಗಳನ್ನು ಪ್ರವೇಶ ಮಾಡಿಕೊಳ್ಳಲು ದಿನಾಂಕ: 10–08–2019 ರಂದು ಬೆಳಿಗ್ಗೆ 8.00 ರಿಂದ 11.00 ಗಂಟೆಯೊಳಗೆ ನೋಂದಣಿ ಸಮಿತಿಯ ಮುಂದೆ ಪ್ರವೇಶಕ್ಕೆ ಸಂಬಂಧಿಸಿದ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಸಂದರ್ಶನಕ್ಕೆ, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ ಇಲ್ಲಿ ಹಾಜರಾಗಲು ಸೂಚಿಸಿದೆ.

ಉಳಿಕೆಯಾಗಿರುವ ಸೀಟುಗಳ ಹಂಚಿಕೆಯನ್ನು ಸಿ.ಇ.ಟಿ ರ್‍ಯಾಂಕಿನ ಆಧಾರದ ಮೇಲೆ ಮಾಡಲಾಗುವುದು. ಸಿ.ಇ.ಟಿ. ರ್‍ಯಾಂಕ್ ಪ್ರಮಾಣ ಪತ್ರವು ಕಡ್ಡಾಯವಾಗಿರುತ್ತದೆ, ಹಾಗೂ ಆಯ್ಕೆಯಾದ ವಿದ್ಯಾರ್ಥಿಗಳು ಅದೇ ದಿನಾಂಕದಂದು ಪ್ರವೇಶವನ್ನು ಪಡೆಯತಕ್ಕದ್ದು. ಪ್ರಥಮ ಬಿ.ಫಾರ್ಮ ಪ್ರವೇಶ ಶುಲ್ಕ ರೂ. 14,470/-.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080 – 22222681. ಅಥವಾ Email principal.gcp123@gmail.com website : www.govtcopble.org ಸಂಪರ್ಕಿಸಬಹುದು.

***

## PRESS NOTE

Bengaluru, August 3rd (Karnataka Information)

Eligible candidates are informed that counselling for the admission to I B. Pharm. Course for the unfilled seats (After the second extended round of Counselling by CET) in Government College of Pharmacy, P. Kalinga Rao Road, Subbaiah Circle, Bengaluru-27 for the year 2019-20 will be held on 10-08-2019.

The remaining seats will be allotted only as the basis of CET ranking. CET rank certificate is mandatory. The students have to appear before the registration committee on 10-08-2019 between 8.00 am to 11.00 am with all the original documents at the above mentioned address. The selected candidates should take admission on the same day by paying Rs 14,470/-.

For more details Contact Phone No 080-22222981 or email: principal.gcp123@gmail.com, website : www.govtcopblr.org.

***

## ಅರ್ಜಿ ಆಹ್ವಾನ

ಬೆಂಗಳೂರು, ಆಗಸ್ಟ್ 3 ( ಕರ್ನಾಟಕ ವಾರ್ತೆ)

ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ 2019 ನೇ ಸಾಲಿನಲ್ಲಿ ವಿಕಲಚೇತನರ ಸಬಲೀಕರಣಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವ್ಯಕ್ತಿ/ಸಂಸ್ಥೆಗಳಿಗೆ ರಾಷ್ಟ್ರ ಪ್ರಶಸ್ತಿಯನ್ನು ನೀಡಲು ಅರ್ಜಿಗಳನ್ನು ಆಹ್ವಾನಿಸಿದೆ.

ಈ ಪ್ರಶಸ್ತಿಗೆ ಅರ್ಹರಿರುವ ವಿಕಲಚೇತನ ವ್ಯಕ್ತಿಗಳು ಹಾಗೂ ವಿಲಚೇತನರಿಗಾಗಿ ಶ್ರಮಿಸುತ್ತಿರುವ ಸಂಸ್ಥೆಗಳು ಆಯಾ ಜಿಲ್ಲೆಗಳ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಆಂಗ್ಲ ಭಾಷೆಯಲ್ಲಿ ಅರ್ಜಿಯನ್ನು ಪೂರಕ ದಾಖಲೆಗಳೊಡನೆ 09-08-2019ರೊಳಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಹಾಗೂ ಅರ್ಜಿ ನಮೂನೆಗಳಿಗಾಗಿ ವೆಬ್‌ಸೈಟ್ ವಿಳಾಸ www.disabilityaffairs.gov.in ನ್ನು ಪರಿಶೀಲಿಸಲು ಮತ್ತು ಆಯಾ ಜಿಲ್ಲೆಗಳ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಅಥವಾ ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರನ್ನು ಸಂಪರ್ಕಿಸಬಹುದಾಗಿದೆ ಹಾಗೂ ದೂರವಾಣಿ ಸಂಖ್ಯೆ: 080-22866066, 22866046, 22860907 ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಅರ್ಜಿ ಆಹ್ವಾನ

ಬೆಂಗಳೂರು, ಆಗಸ್ಟ್ 3 ಕರ್ನಾಟಕ ವಾರ್ತೆ)

ರಾಷ್ಟ್ರೀಯ ಪತ್ರಾಗಾರ, ನವದೆಹಲಿ ಇವರು 2019–20 ನೇ ಸಾಲಿಗೆ ಕೇಂದ್ರ ಹಣಕಾಸು ನೆರವಿನ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿನ ಐತಿಹಾಸಿಕ ದಾಖಲೆಗಳ ಸಂರಕ್ಷಣೆ, ಹಸ್ತಪ್ರತಿಗಳು, ಅಪರೂಪದ ಪುಸ್ತಕಗಳು, ಐತಿಹಾಸಿಕ ನಕಾಶೆಗಳು, ಅಮೂಲ್ಯ ಐತಿಹಾಸಿಕ ದಾಖಲೆಗಳು, ಪತ್ರಾಗಾರಕ್ಕೆ ಯೋಗ್ಯವಾದ ಛಾಯಚಿತ್ರಗಳ ಮುದ್ರಣಗಳನ್ನು ಜೋಪಾನಪಡಿಸುವಿಕೆ/ವೈಜ್ಞಾನಿಕ ಸಂರಕ್ಷಿಸುವಿಕೆ, ದುರಸ್ತಿ, ಪ್ರಕಟಣೆ, ಪಟ್ಟಿ ಮಾಡುವಿಕೆ ಕಾರ್ಯ ಹಾಗೂ ಕಂಪ್ಯೂಟರ್/ಸ್ಕ್ಯಾನರ್ ಇತ್ಯಾದಿ ಪರಿಕರಗಳ ಖರೀದಿ ದಾಖಲೆಗಳ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ಸರ್ಕಾರಿ ಹಾಗೂ ನೊಂದಾಯಿತ ಸ್ವಯಂ ಸಂಘ/ಸಂಸ್ಥೆಗಳು, ವ್ಯಕ್ತಿಗಳು ವಿಶ್ವವಿದ್ಯಾಲಯಗಳು ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಈ ಯೋಜನೆಯಡಿ ವಿಸ್ತರಿಬಹುದಾದ ಹಣಕಾಸು ನೆರವಿನ ಗರಿಷ್ಠ ಮಿತಿಯು ರೂ 10.00 ಲಕ್ಷ (ಹತ್ತು ಲಕ್ಷ ರೂ ಮಾತ್ರ) ವಾಗಿರುತ್ತದೆ ಮತ್ತು ಯೋಜನೆಯು ಒಟ್ಟು ವೆಚ್ಚದ 75.25 ಅನುಪಾತದಲ್ಲಿರುತ್ತದೆ. (ಆಂದರೆ ಕೇಂದ್ರ ಸರ್ಕಾರದ ಪಾಲು 75% ರಷ್ಟು ಮತ್ತು ಸಂಘ/ಸಂಸ್ಥೆಗಳ ಪಾಲು 25ರಷ್ಟು)

ಆಸಕ್ತರು ನಿಗದಿತ ಅರ್ಜಿ ನಮೂನೆ ಹಾಗೂ ವಿವರಗಳಿಗೆ ರಾಷ್ಟ್ರೀಯ ಪತ್ರಾಗಾರ, ನವದಹಲಿಯ ಅಂತರ್ಜಾಲ www.nationalarchives.nic.in Section Grants-in-aid on home page ಹಾಗೂ www.kannadasiri.kar.nic.in ನಿಂದ ಪಡೆದು ಭರ್ತಿಮಾಡಿ ಸಲ್ಲಿಸುವುದು.

ರಾಜ್ಯ ಮಟ್ಟದ ಶೋಧಕ ಸಮಿತಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಆಹ್ವಾನಿತ ಅರ್ಜಿಗಳನ್ನು ಪರಿಶೀಲಿಸಿ, ಸೂಕ್ತ ಆಯ್ಕೆ ಪಟ್ಟಿಯನ್ನು ಛೇರ್ಮನ್, ಗ್ರಾಂಟ್ಸ್ ಕಮಿತಿ ಮತ್ತು ಡೈರಕ್ಟರ್ ಜನರಲ್ ನ್ಯಾಷನಲ್ ಆರ್ಕಿವ್ಸ್ ಆಫ್ ಇಂಡಿಯಾ, ಜನಪತ್ , ನವದೆಹಲಿ–110 001 ಇವರಿಗೆ ಕಳುಹಿಸಲಾಗುವುದು.

ನಿಗದಿತ ನಮೂನೆಯಲ್ಲಿರುವ ಅರ್ಜಿಗಳನ್ನು ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಮೊದಲನೆ ಮಹಡಿ, ಕೊಠಿಡಿ ಸಂ: 126, ವಿಕಾಸಸೌಧ, ಬೆಂಗಳೂರು–1 ಇವರಿಗೆ ಆಗಸ್ಟ್ 28 ರೊಳಗಾಗಿ ಸಲ್ಲಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಾರಿಗೆ ಅದಾಲತ್

ಬೆಂಗಳೂರು, ಆಗಸ್ಟ್ 3 ಕರ್ನಾಟಕ ವಾರ್ತೆ)

ಪ್ರಾದೇಶಿಕ ಸಾರಿಗೆ ಕಚೇರಿ, ಬೆಂಗಳೂರು (ಪೂರ್ವ), ಕಸ್ತೂರಿನಗರದಲ್ಲಿ ಆಗಸ್ಟ್ 5 ರ ಸೋಮವಾರ ಮಧ್ಯಾಹ್ನ 3.00 ಗಂಟೆಗೆ ಸಾರಿಗೆ ಅದಾಲತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಇಲಾಖೆಯ ಹಿರಿಯ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದು, ಈ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರು ಈ ಸಾರಿಗೆ ಅದಾಲತ್‌ನಲ್ಲಿ ತಮ್ಮ ಕುಂದುಕೊರತೆಗಳ ಕುರಿತು ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## TRANSPORT ADALAT

Bengaluru, August 3rd (Karnataka Information)

Publice are hereby informed that the “Transport Adalat” will be held on 5th August 2019 Monday at 3.00 pm in the premises of Regional Transport Office Kasturinagar, Bangalore -43 which will be attended by Senior Officers of Transport Department.  The public are requested to participate in the adalath says official press release

# <u>ಫಲಿತಾಂಶ ಪ್ರಕಟ</u>

ಬೆಂಗಳೂರು, ಆಗಸ್ಟ್ 3 ಕರ್ನಾಟಕ ವಾರ್ತೆ)

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷ ಮಂಡಳಿ (ಇತರೆ ಪರೀಕ್ಷೆಗಳು) ವತಿಯಿಂದ ಮೇ – 2019 ರಲ್ಲಿ ನಡೆದ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳ ಫಲಿತಾಂಶವನ್ನು ಆಗಸ್ಟ್ 6 ರಂದು ಬೆಳಿಗ್ಗೆ 10.00 ಗಂಟೆಗೆ ರಾಜ್ಯ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಪ್ರಕಟಿಸಲಾಗುವುದು.

ಫಲಿತಾಂಶವನ್ನು ಮಂಡಳಿಯ ವೆಬ್‌ಸೈಟ್ www.kseeb.kar.nic.in ವಿಳಾಸದಲ್ಲಿ ಆಗಸ್ಟ್ 5 ರಂದು ಮಧ್ಯಾಹ್ನ 12.00 ಗಂಟೆಯ ನಂತರ ವೀಕ್ಷಿಸಬಹುದು. ಉತ್ತರಪತ್ರಿಕೆ ಛಾಯಾಪ್ರತಿ ಮತ್ತು ಅಂಕಗಳ ಮರುಎಣಿಕೆಗೆ ಅರ್ಜಿ ಸಲ್ಲಿಸಲು ಆಗಸ್ಟ್ 14 ಕೊನೆಯ ದಿನಾಂಕವಾಗಿರುತ್ತದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.